ದಿನಾಂಕ 02-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನೇ ಶರಣಗೌಡ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳ ತಂದೆ ಮಶಾಕ ಪಟೇಲರವರು ಮೃತಪಟ್ಟು 40 ವರ್ಷಕ್ಕಿಂತ ಮೇಲಾಯಿತು ಎಂದರೆ ಸರಿಯಲ್ಲ. ಸದರಿ ಮಶಾಕ ಪಟೇಲರವರು ಸುಮಾರು 25-30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

ನಿಡಿ-75 ರಸೀದಿ ಬರೆಯುವ ಸಮಯದಲ್ಲಿ ಸಲೀಂ ಪಟೇಲ, ರಜಾಕ ಪಟೇಲ, ಜೈತುನಬಿ, ದುಂಡಪ್ಪ, ಮಶಾಕಪಟೇಲ ಗೋಳಾ, ಮಶಾಕ ಪಟೇಲ ಮತ್ತು ಕಂಠೆಪ್ಪ ರವರು ಹಾಜರಿದ್ದರು. ಮಶಾಕಪಟೇಲ ಗೋಳಾರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮತ್ತೊಬ್ಬ ಮಶಾಕಪಟೇಲರವರ ತಂದೆಯ ಹೆಸರು ಸಾಹೇಬ ಪಟೇಲ. ಪ್ರತಿವಾದಿಗಳ ತಂದೆಯು ಸದರಿ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-75 ರಸೀದಿ ಬರೆದ ದಿನವೇ ಮಾತುಕತೆ ಮಾಡಿ ರಸೀದಿಯನ್ನು ಸಹ ಬರೆಯಲಾಯಿತು. ನಿಡಿ-75 ರ ಮೇಲೆ ಇರುವ ಸ್ಟ್ಯಾಂಪ್ ಚೀಟಿ ಸಾಮಾನ್ಯವಾಗಿ ಸಿಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-75 ರಲ್ಲಿ ದಸ್ತೂರ್ ಶರಣಗೌಡರ ತಂದೆಯ ಹೆಸರು ಬರೆದಿಲ್ಲ ಎಂದರೆ ನಿಜ.

ನಿಡಿ-75 ಬರೆದ ಸಮಯದಲ್ಲಿ ನೀಡಲಾದ ಹಣದ ಮುಖಬೆಲೆ ನನಗೆ ಗೊತ್ತಿಲ್ಲ. ಸದರಿ ಹಣವನ್ನು ನಾನೇ ಎಣಿಕೆ ಮಾಡಿ ನೀಡಿರುತ್ತೇನೆ. ಮಶಾಕ ಪಟೇಲರವರು ಕೊಟ್ಟ ಹಣವನ್ನು ನಾನು ಸಲೀಂ ಪಟೇಲರಿಗೆ ಕೊಟ್ಟಿರುತ್ತೇನೆ. ನಿಡಿ-75 ಸಲೀಂ ಪಟೇಲ, ರಜಾಕ್ ಪಟೇಲ ಹಾಗೂ ಜೈತುನಬಿರವರಾಗಲೀ ಬರೆದುಕೊಟ್ಟಿರುವುದಿಲ್ಲ, ನಾವೇ ಅದನ್ನು ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ಮಶಾಕಪಟೇಲರವರ ಹೊಲ ಸ್ವಲ್ಪ ಚೆನ್ನಾಗಿದೆ ಎಂಬ ಕಾರಣದಿಂದ ಮಶಾಕ ಪಟೇಲರು ಸಲೀಂ ಪಟೇಲರಿಗೆ ಹಣ ನೀಡಿ ನಿಡಿ-75 ನ್ನು ಬರೆಯಲಾಗಿರುತ್ತದೆ. ಸ.ನಂ.1 ರ ಹೊಲ ಚೆನ್ನಾಗಿದೆ ಎಂದು ಸದರಿ ಹಣ ನೀಡಲಾಗಿರುತ್ತದೆ. ನಾನು ಪ್ರತಿವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.1 ಸಲೀಂ ಪಟೇಲರವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಸ.ನಂ.1 ಮತ್ತು ಸ.ನಂ.75 ಅಥವಾ ಸ.ನಂ.76 ರ ಸ್ವತ್ತನ್ನು ಪ್ರತಿವಾದಿಗಳ ತಂದೆಗೆ ಕೊಟ್ಟಿರುತ್ತಾರೆ ಮತ್ತು ವಾದಿಗಳ ತಂದೆ ಹಾಗೂ ಮತ್ತೊಬ್ಬರಿಗೆ ಗೋಳಾ ಗ್ರಾಮದ ಸ್ವತ್ತುಗಳನ್ನು ನೀಡಲಾಗಿರುತ್ತದೆ. ಯಾವ ಕಾಲದಲ್ಲಿ ಸ್ವತ್ತುಗಳು ಪಾಲು ಆಗಿವೆ ಎಂದು ನನಗೆ ಗೊತ್ತಿಲ್ಲ. ಯಾವುದೇ ಪಾಲು ಆಗದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು, ಜೇವರ್ಗಿ